ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಸ್ವಾಯತ್ತ)

ಬಿ.ಎನ್. ರಸ್ತೆ, ಮೈಸೂರು – 570 025

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ: 03.01.2018

## ಪ್ರಕಟಣೆ ಕೃಪೆಗಾಗಿ

## ಸಂಸ್ಕೃತೋತ್ಸವ

ಮೈಸೂರು ನಗರದ ಬಿಎನ್ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪದವಿ ಹಾಗೂ ಪದವಿಪೂರ್ವ ಸಂಸ್ಕೃತ ವಿಭಾಗದಿಂದ ಸಂಸ್ಕೃತೋತ್ಸವ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ದಿನಾಂಕ: 02.01.2018 ರಂದು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಪ್ರಾಚ್ಯಾವಿದ್ಯಾ ಸಂಶೋಧನಾಲಯದ ನಿವೃತ್ತ ಸಂಶೋಧಕರಾದ ವಿದ್ವಾನ್ ಡಾ. ಹೆಚ್. ವಿ. ನಾಗರಾಜರಾವ್ ಮಹೋದಯರವರು " ಕಾಳಿದಾಸನ ಕಾವ್ಯಗಳು" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುತ್ತಾ ಕಾಳಿದಾಸನು "ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಕವಿಕುಲಗುರು ಎಂದು ಪ್ರಖ್ಯಾತನಾಗಿದ್ದು ಉಪಮೆಯನ್ನು ಕೊಡುವುದರಲ್ಲಿ ಅಗ್ರಗಣ್ಯನಾಗಿದ್ದನು. ರಘುವಂಶ ಮಹಾಕಾವ್ಯದಲ್ಲಿ ಮಂದಃಕವಿಮಶಃಪ್ರಾರ್ಥೀ ಗಮಷ್ಯಾಮ್ಯುಪಹಾಸ್ಯತಾಮ್। ಪ್ರಾಂಶುಲಭ್ಯೇಫಲೇ ಲೋಭಾದುದ್ವಾಹುರಿವವಾಮನಃ॥ ಎಂಬ ಶ್ಲೋಕದಂತೆ ತನ್ನ ವಿನಯತೆಯನ್ನು ವ್ಯಕ್ತಪಡಿಸಿ ತನ್ನ ಕಾವ್ಯಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಮೆರೆದಿದ್ದಾನೆ. ವಿಶ್ವದ ಎಲ್ಲಾ ಕಡೆ ಸಂಚರಿಸಿ ಸಂಸ್ಕೃತಿ ಮತ್ತು ಅನುಭವವನ್ನು ಹೊಂದಿ ವಾಗ್ದೇವಿಯ ವರಪುತ್ರನಾಗಿ ವಿಜೃಂಭಿಸಿದ್ದಾನೆ. ತನ್ನ ನಾಟಕಗಳಲ್ಲಿ ಸ್ವರ್ಗ ಮತ್ತು ಮೃತ್ಯುಲೋಕವನ್ನು ಬೆಸಿದಿದ್ದಾನೆ. ತನ್ನ ಏಳು ಕೃತಿಗಳಲ್ಲಿಯೂ ತನ್ನ ಪಾಂಡಿತ್ಯವನ್ನು ಪ್ರದರ್ಶಿಸಿ ಮುಂದಿನ ಕವಿಗಳಿಗೆ ಮಾರ್ಗದರ್ಶಿಯಾಗಿದ್ದಾನೆ" ಎಂದರು

"ಕಾವ್ಯೇಷು ನಾಟಕಂ ರಮ್ಯ ತತ್ರರಮ್ಯಾ ಶಕುಂತಲಾ। ತತ್ರಾಪಿಚ ಚತುರ್ಥೋಽಅಂಕಃ ತತ್ರಶ್ಲೋಕ ಚತುಷ್ಟಯಮ್ ಎಂಬಂತೆ ಕಾವ್ಯಗಳಲ್ಲಿ ನಾಟಕ ರಮಣೀಯವಾದದ್ದು. ಅದರಲ್ಲೂ ಶಾಕುಂತಲ ನಾಟಕ ರಮ್ಯವಾದುದು–, ಕಾಳಿದಾಸ ಗಿರಾಸಾರಂ ಕಾಳಿದಾಸ: ಸರಸ್ವತಿ______। ಎಂಬಂತೆ ಕಾಳಿದಾಸನ ಮಾತಿನ ಸಾರವನ್ನು ಕಾಳಿದಾಸನೇ ಬಲ್ಲನು ಅಥವಾ ಸರಸ್ವತಿ ಬಲ್ಲಳು, ಅಥವಾ ಬ್ರಹ್ಮನೇ ಬಲ್ಲನು. ಸಂಸ್ಕೃತಾಧ್ಯಯನವನ್ನು ಮಾಡಿದರೆ ಅದರಲ್ಲಿ ಅನೇಕ ಪ್ರಯೋಜನಗಳು ದೊರೆಯುತ್ತವೆ. ಆದ್ದರಿಂದ ಭಾಷಾಜ್ಞಾನವನ್ನು ಪಡೆಯಬೇಕಾದರೆ ಸಂಸ್ಕೃತಾಧ್ಯಯನ ಅತ್ಯವಶ್ಯಕ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡುತ್ತಾ "ಸಂಸ್ಕೃತಾಧ್ಯಯನ ಮಾಡಿದರೆ ಸ್ಪಷ್ಟವಾದ ಉಚ್ಚಾರಣೆ, ಅಪಾರವಾದ ಜ್ಞಾನ ಸಂಪತ್ತು ಲಭ್ಯವಾಗುತ್ತದೆ. ವೇದಗಳು ರಾಮಾಯಣ ಮೊದಲಾದ ಮಹಾಕಾವ್ಯಗಳನ್ನು ಅಧ್ಯಯನ ಮಾಡಿ ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು" ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರರವರು ಉಪಸ್ಥಿತರಿದ್ದರು. ಸಂಸ್ಕೃತ ವಿಭಾಗದ ವಿದ್ಯಾರ್ಥಿಗಳು ವೇದಘೋಷ ಮತ್ತು ಪ್ರಾರ್ಥನೆ ನಡೆಸಿಕೊಟ್ಟರು. ಪ್ರೊ ಎಂ. ವಿಶ್ವನಾಥ್‌ರವರು ಎಲ್ಲರನ್ನು ಸ್ವಾಗತಿಸಿದರು. ಸಂಸ್ಕೃತ ವಿಭಾಗದ ಉಪನ್ಯಾಸಕಿಯಾದ ಶ್ರೀಮತಿ ಡಾ. ಎಂ. ಎಸ್. ಕೋಮಲ ವಂದಿಸಿದರು.

(ಪ್ರೊ. ಎಂ. ಮಹದೇವಪ್ಪ)
ಪ್ರಾಂಶುಪಾಲರು

PRINCIPAL
J.S.S. College
Ooty Road, Mysore-570 0..

ಗೆ
ಸಂಪಾದಕರು

_ _ _ _ _ _ _ _ _ _ _

_ _ _ _ _ _ _ _ _ _ _

ಮೈಸೂರು